‘ಮಗಾ ಇಂಥದೆಲ್ಲ ಅಪಸವ್ಯ ಮಾತಾಡ್ಬೇಡ. ಅಸ್ತು ದೇವತೆ ಅಂತ ಮೇಲೆ ಒಬ್ಬಳು ಇರ್ತಾಳಂತೆ. ಅವಳು ಅಸ್ತು ಅಸ್ತು ಅಂತ ಹೇಳ್ತಾ ಇರ್ತಾಳಂತೆ. ಈಗ ಆಗಿರುದೇ ಸಾಕು ಮಗಾ ನಮಿಗೆ’ ಅಂತ ಕಣ್ಣಲ್ಲಿ ನೀರು ತುಂಬಿಕೊಂಡು ಹೇಳಿದಳು. ‘ಅಜ್ಜೀ ಹಸಿವು ತಡ್ಕೊಳ್ಳಿಕ್ಕೆ ಆಗೂದಿಲ್ಲ. ಎಲ್ಲಿಂದಾದ್ರೂ ಎಂತಾದ್ರೂ ತಿನ್ಲಿಕ್ಕೆ ತೆಕ್ಕೊಂಡು ಬಾ’ ಅಂತ ಸಣ್ಣ ಮೊಮ್ಮಗಳು ಹಟಮಾಡಿದಾಗ ರಾಜೀವಿ ಹತ್ತಿರದ ಅಂಗಡಿಯವರ ಹತ್ರ ದಮ್ಮಯ್ಯ ಹಾಕಿ ಬ್ರೆಡ್ ಬನ್ನು ತಂದಿದ್ದಳು. ಅದನ್ನು ತಿಂದು ನೀರು ಕುಡಿದು ಮಲಗಿದ್ದರು.

ಕೊರೊನಾದ ಎರಡನೆಯ ಅಲೆಯಲ್ಲಿ ಲಾಕ್ ಡೌನ್ ಘೋಷಣೆ ಆದಾಗ ರಾಜೀವಿ ಹೈರಾಣಾಗಿದ್ದಳು. ಕೆಲಸ ಇಲ್ಲ. ಸಂಪಾದನೆಯೂ ಇಲ್ಲ. ಆಚೆ ಈಚೆ ಮನೆಯವರ ಹತ್ತಿರ, ಅಂಗಡಿಯವರ ಹತ್ತಿರ ಎಷ್ಟು ಅಂತ ಕೇಳುದು? ಯಾರಾದ್ರೂ ಎಷ್ಟು ಅಂತ ಕೊಡ್ತಾರೆ? ಆಗ ಯಾರೋ ಊರಿನವರು. ‘ರಾಜೀವೀ... ಪೇಟೆಯಲ್ಲಿ ಪಾಪದವರಿಗೆ ಅಂತಲೇ ಸರ್ಕಾರದವರು ಕ್ಯಾಂಟೀನ್ ಓಪನ್ ಮಾಡಿದ್ದಾರೆ. ದಿನಾ ಅಲ್ಲಿ ತಿಂಡಿ–ಊಟ ಫ್ರೀ ಕೊಡ್ತಾರೆ. ತುಂಬ ಜನ ಎಲ್ಲ ಹೋಗಿ ಅಲ್ಲಿ ತಿಂತಾರೆ ಅಥವಾ ಪಾರ್ಸೆಲ್ ತರ್ತಾರೆ. ನೀನು ಸಾ ಅಲ್ಲಿಗೆ ಹೋಗು. ಪಾಪ ಮಕ್ಕಳನ್ನು ಹೀಗೆ ಹಸಿವಿನಿಂದ ಸಾಯುವ ಹಾಗೆ ಮಾಡ್ಬೇಡ’ ಅಂತ ಹೇಳಿದ್ದರು. ರಾಜೀವಿಗೆ ಒಂದು ಸರ್ತಿ ಎದೆ ಜಲ್ ಅಂದಿತು. ನಾನು ದಿನಾ ಪೇಟೆಗೆ ನಡ್ಕೊಂಡು ಹೋಗುದಾ? ಒಂಬತ್ತು ಕಿಲೋ ಮೀಟರ್ ಆಗ್ತದೆ. ಬಸ್ಸು ಬೇರೆ ಇಲ್ಲ. ಹೋಗುದು ಮಾತ್ರ ಅಲ್ಲ, ವಾಪಾಸ್ ಕೂಡ ನಡ್ಕೊಂಡೇ ಬರ್ಬೇಕು. ಮಾತ್ರ ಅಲ್ಲ, ಪಾಪದವರಿಗೆ ಅಂತ ಸರ್ಕಾರದವರು ನಡೆಸುವ ಕ್ಯಾಂಟೀನಿನಲ್ಲಿ ತಾನು ಸಾ ನಿಲ್ಬೇಕು!. ಎಂಥ ಮಾಡುದು? ನಿಲ್ಲದೇ ಉಪಾಯ ಇಲ್ಲ. ಮೊಮ್ಮಕ್ಕಳನ್ನು ಸಾಕಬೇಕು.

ಕಳೆದ ಒಂದು ವಾರದಿಂದ ದಿನಾ ಬೆಳಿಗ್ಗೆ ನಡ್ಕೊಂಡು ಹೋಗಿ ಕ್ಯಾಂಟೀನಿನಿಂದ ತಿಂಡಿ ತರ್ತಾ ಇದ್ದಳು. ಸುರು ಸುರೂವಿಗೆ ಅವಳಿಗೆ ಒಂದು ನಮೂನಿ ಆಗ್ತಿತ್ತು. ಅಲ್ಲಿ ಗಂಡಸರು ಹೆಂಗಸರಿಗೆ ಪ್ರತ್ಯೇಕ ಕ್ಯೂ ಮಾಡಿದ್ದರು. ಒಂದೊಂದು ಮೀಟರ್ ದೂರದಲ್ಲಿ ಚೌಕ ಹಾಕಿದ್ದರು. ಅದರಲ್ಲೇ ನಿಲ್ಲಬೇಕಿತ್ತು. ಮೂರು ನಾಕು ದಿನದಲ್ಲೇ ಜನ ಬರುದು ಜಾಸ್ತಿ ಆಗಿತ್ತು. ಬೇಗ ಬಂದು ಗುರುತಿಗೆ ಅಂತ ತಮ್ಮ ಮೆಟ್ಟುಗಳನ್ನು ಅಥವಾ ಬೈರಾಸನ್ನೊ ಚೌಕದಲ್ಲಿ ಹಾಕಿ ಒಂದು ಕಡೆ ಕೂತ್ಕೊಳ್ತಿದ್ದರು. ಅವಳು ಸಾ ಹಾಗೇ ಮಾಡ್ತಿದ್ದಳು. ದಿನ ದಿನಾ ಜನ ಜಾಸ್ತಿಯಾಗಿ ಅವತ್ತು ಅವಳಿಗೆ ತಿಂಡಿ ಸಿಕ್ಕಿರಲಿಲ್ಲ. ಬರುವಾಗ ಸಾ ತಡ ಆಗಿತ್ತು. ಹಿಂದಿನ ದಿನ ಹಾಗೆ ಆದದ್ದಕ್ಕೆ ಅವತ್ತು ಬೇಗ ಬಂದಿದ್ದಳು.

ಕಂಬದ ಬುಡದಲ್ಲಿ ಕೂತಿದ್ದ ಅವಳಿಗೆ ಹಾಗೆಯೇ ನಿದ್ರೆ ಬಂತು. ಸ್ವಲ್ಪ ಹೊತ್ತಾದ ನಂತ್ರ ಎಂಥದೋ ಗಲಾಟೆ ಕೇಳಿ ಎಚ್ಚರ ಆಯಿತು. ಹೆಂಗಸರ ಸಾಲಿನಲ್ಲಿ ಗಲಾಟೆ. ಆಗಲೇ ತುಂಬ ಜನ ಹೆಂಗಸರು ಬಂದಿದ್ದರು. ‘ಬಿಡ್ಬೇಡಿ ಆ ಹೆಂಗಸನ್ನು ಸಾಲಿನಲ್ಲಿ ತೂರಿಕೊಳ್ಳಿಕ್ಕೆ. ಅವರ ಜಾತಿಯೇ ಹಾಗೆ, ಸುರು ಸುರುವಿಗೆ ಅಕ್ಕ ಅಮ್ಮ ಅಂತೆಲ್ಲ ಹೇಳ್ತಾರೆ. ಪಾಪ ಅಂತ ಕನಿಕರ ತೋರಿಸಿದ್ರೆ ಸಾಕು ಅವರ ಜಾತಿಯವರನ್ನೆಲ್ಲ ತಂದು ತೂರಿಸ್ತಾರೆ’ ಅಂತೆಲ್ಲ ಹೆಂಗಸರು ಜೋರು ಬಾಯಿ ಮಾಡ್ತಿದ್ರು. ಕೆಲವು ಗಂಡಸರು ಸಾ ಹೆಂಗಸರ ಮಾತಿಗೆ ಸಮ್ಮತಿಯ ಧ್ವನಿ ಕೊಡ್ತಿದ್ರು. ಆ ಹೆಂಗಸು ‘ಇಲ್ಲ ನಾನು ಇಲ್ಲಿಯೇ ನಿಂತಿದ್ದೆ. ಗುರುತಿಗೆ ಅಂತ ನನ್ನ ಸ್ಕಾರ್ಫ್ ಹಾಕಿದ್ದೆ. ಆಚೆ ಹೋಗಿ ನೀರು ಕುಡಿದುಕೊಂಡು ಬರುವಾಗ ಅದು ಗಾಳಿಗೆ ಹಾರಿ ಹೋಗಿತ್ತು. ನನ್ನನ್ನು ನಂಬಿ’ ಅಂತ ದಮ್ಮಯ್ಯ ಹಾಕ್ತಾ ಇದ್ದಳು. ಅಷ್ಟು ಹೊತ್ತಿಗೆ ಒಬ್ಬಳು ತೋರದ ಹೆಂಗಸು, ‘ನಾನು ಅಷ್ಟು ಹೊತ್ತಿಂದ ಇಲ್ಲೇ ನಿಂತಿದ್ದೇ ಯಾರು ಸಾ ಇರ್ಲಿಲ್ಲ ಇಲ್ಲಿ ಆಯ್ತಾ? ಸುಳ್ಳು ಹೇಳ್ತಿಯಾ!?’ ಅಂತ ಹೇಳಿದವಳೆ, ಅವಳ ಜುಟ್ಟು ಹಿಡಿದು ರಪ್ಪಂತ ಕೆಪ್ಪೆಗೆ ಎರಡು ಬಾರಿಸಿದಳು. ಜೋರಾಗಿ ದೂಡಿದಳು. ಆ ಹುಡುಗಿ ಆಯ ತಪ್ಪಿಬಿದ್ದಳು. ಕೆಲವರು ಹಾಗೆಲ್ಲ ಮಾಡ್ಬಾರ್ದು ಅಂತ ಹೊಡೆದ ಹೆಂಗಸಿಗೆ ಬೈದ್ರು. ಬಿದ್ದ ಹುಡುಗಿಯನ್ನು ನೋಡ್ಲಿಕ್ಕೆ ಯಾರು ಸಾ ಬರ್ಲಿಲ್ಲ. ರಾಜೀವಿಗೆ ಅವಳನ್ನು ನೋಡಿ ಪಾಪ ಅನಿಸಿತು. ಸೀದ ಹೋಗಿ ಬಿದ್ದಿದ್ದ ಅವಳನ್ನು ಎಬ್ಬಿಸಿ ಕರೆದುಕೊಂಡು ಬಂದಳು. ನೀರು ಕುಡಿಸಿದಳು. ಪೆಟ್ಟು, ಅವಮಾನ ಇತ್ಯಾದಿಗಳಿಂದ ಅವಳ ಕಣ್ಣಲ್ಲಿ ನೀರು ತುಂಬಿಕೊಂಡಿತ್ತು. ರಾಜೀವಿ ಅವಳ ಹಣೆಯ ಗಾಯವನ್ನು ಒರೆಸಿದಳು. ‘ಎಂತ ಮಗಾ? ಎಂತ ಆಯ್ತು?’ ಅಂತ ಕೇಳಿದಳು.

‘ಎಂತಾಂತ ಹೇಳುದಮ್ಮಾ? ಬಡವರು ಬದುಕಲೇ ಬಾರದು ಅಂತ ಅನಿಸ್ತದೆ. ಎಲ್ಲಿಯಾದರೂ ಹಾರಿ ಜೀವ ತೆಕ್ಕೊಳ್ಳುವಾ ಅಂತ ಅನಿಸ್ತದೆ’ – ಅವಳು ಕಣ್ಣಲ್ಲಿ ನೀರು ತುಂಬಿಕೊಂಡು ಹೇಳಿದಳು. ಒಂದಷ್ಟು ಹೊತ್ತು ದಿಣ್ಣ ಕೂಗಿದ ನಂತ್ರ, ‘ಅಮ್ಮ ನಾನು ತಿಂಡಿ ತೆಕ್ಕೊಳ್ಳಿಕ್ಕೆ ಅಂತ ಕ್ಯೂನಲ್ಲಿ ನಿಂತಿದ್ದೆ. ಐವತ್ತು ಅರುವತ್ತು ಜನರ ಆಚೆಗೆ ನನ್ನ ಜಾಗ ಇತ್ತು. ನಿಂತು ನಿಂತು ಕಾಲು ಬಚ್ಚುತ್ತದೆ ಅಂತ ನನ್ನ ಸ್ಕಾರ್ಫನ್ನು ಹಾಕಿದ್ದೆ ಜಾಗದಲ್ಲಿ. ನೀರು ಕುಡೀಬೇಕು ಅಂತ ಆಚೆ ಹೋದಾಗ ನಾನು ಸ್ಕಾರ್ಫ್ ಹಾಕಿದ್ದ ಜಾಗದಲ್ಲಿ ಬೇರೆ ಯಾರೋ ಇದ್ದರು. ನಾನು ಏಳಿ ಇದು ನನ್ನ ಜಾಗ ಅಂತ ಹೇಳಿದೆ. ಅವರು ನಿನ್ನ ಜಾಗ ಅಂತ ಬರ್ದು ಇಟ್ಟಿದ್ದಾರಾ ಯಾರಾದ್ರು? ಅಂತ ಪೆದಂಬು ಮಾತಾಡಿದ್ರು. ನಾನು ಗುರುತಿಗೆ ಅಂತ ಸ್ಕಾರ್ಫ್ ಹಾಕಿದ್ದೆ ಅಂತ ಹೇಳಿದೆ. ಅದಕ್ಕೆ ಅವರು ನಿನ್ನ ಕರ್ಮ. ನೀನು ಹಾಕಿದ ಸ್ಕಾರ್ಫ್ ಇಗಾ ಓ... ಅಲ್ಲಿ ಅಂತ ತೋರಿಸಿದ್ರು. ಅದು ಗಾಳಿಗೆ ಹಾರಿ ಆಚೆ ಹೋಗಿ ಬಿದ್ದಿತ್ತು. ಮಾತಿಗೆ ಮಾತು ಬೆಳೆಯಿತು, ಜಗಳ ಆಗಿ ಹೀಗೆ ಆಯಿತು’ ಅಂತ ಹೇಳಿ ತನ್ನ ಮೈಯನ್ನು, ಹರಿದ ಸೀರೆಯನ್ನು ಎಲ್ಲ ತೋರಿಸಿ ಕೂಗಿದಳು. ‘ನಿನ್ನೆ ಮೊನ್ನೆ ಸಾ ತಿಂಡಿ ತೆಕ್ಕೊಂಡು ಹೋಗ್ಲಿಕ್ಕೆ ಅಂತ ಬಂದಿದ್ದೆ. ಜನ ಜಾಸ್ತಿ ಇದ್ದದ್ರಿಂದ ನಂಗೆ ಸಿಗ್ಲೇ ಇಲ್ಲ. ಇವತ್ತು ಸಾ ಹಾಗೇ ಆಗ್ತದಾ ಏನ. ಮನೆಯಲ್ಲಿ ಇಬ್ಬರು ಚಿಕ್ಕ ಮಕ್ಕಳು. ಇವತ್ತು ತಿಂಡಿ ತಂದೇ ತರ್ತೇನೆ ಅಂತ ಹೇಳಿದ್ದೆ. ನೋಡಿದ್ರೆ ಇವತ್ತು ಸಾ ತಿಂಡಿ ಸಿಗುವ ನಮೂನಿ ಇಲ್ಲ’ ಅಂತ ಕಣ್ಣಲ್ಲಿ ನೀರು ತುಂಬಿಕೊಂಡು ಹೇಳಿದಳು. ರಾಜೀವಿ ಅವಳನ್ನು ತನ್ನ ಎದೆಗೆ ಅರಂಟೆ ಹಿಡ್ಕೊಂಡಳು. ಒಂದಷ್ಟು ಹೊತ್ತು ಕೂಗಿ ಆದ ನಂತರ ಅವಳಿಗೆ ಸಮಾಧಾನ ಆಯಿತು.

‘ಎಂತ ಮಗಾ ನಿನ್ನ ಹೆಸರು? ಯಾವ ಊರು?’ ರಾಜೀವಿ ಕೇಳಿದಳು.

‘ಐಶಾಬಿ ಅಂತ ನನ್ನ ಹೆಸರು. ಊರು ಇಲ್ಲಿಯೇ ಆರು ಮೈಲು ದೂರದಲ್ಲಿ. ನಿಮ್ಮ ಹೆಸರು ಎಂತ? ಊರು? ಮನೆಯಲ್ಲಿ ಯಾರು ಸಾ ಸಣ್ಣವರು ಇಲ್ಲವಾ? ಈ ಪ್ರಾಯದಲ್ಲಿ ನೀವೇ ಬಂದಿದ್ದೀರಿ ಇಲ್ಲೀತಂಕ?’

ರಾಜೀವಿ ಒಮ್ಮೆ ದೊಡ್ಡದಾಗಿ ಸ್ವಾಸ ಬಿಟ್ಟಳು. ಕಡೆಗೆ ತನ್ನ ಕತೆ ಹೇಳ್ಳಿಕ್ಕೆ ಸುರು ಮಾಡಿದಳು.

‘ಮಗಾ. ಎಂತಾಂತ ಹೇಳುದು ನನ್ನ ಕತೆಯನ್ನು? ನಾನು ಮದುವೆಯಾಗಿ ಸ್ವಲ್ಪವೇ ಸಮಯಕ್ಕೆ ಗಂಡನನ್ನು ಕಳ್ಕೊಂಡೆ.ನಂಗೆ ಇದ್ದದ್ದು ಒಬ್ಬಳು ಮಗಳು ಮಾತ್ರ. ಸ್ವಂತದ್ದು ಅಂತ ಒಂದು ಸಣ್ಣ ಮನೆ. ನಾಕೈದು ತೆಂಗಿನ ಮರ, ಒಂದೆರಡು ಮಾವಿನ ಮರ, ಒಂದು ಬಾವಿ, ಇಷ್ಟೇ ಇದ್ದದ್ದು ಆಸ್ತಿ ಅಂದರೆ. ಹೊಟ್ಟೆ ಕೇಳ್ಬೇಕಲ್ವಾ? ಯೆಂತದ್ರೂ ಮರ್ಯಾದೆಯಿಂದ ಸಂಪಾದನೆ ಮಾಡಿ ಜೀವನ ಸಾಗಿಸ್ಬೇಕು ಅಂತ ಎಣಿಸಿ ಹಪ್ಪಳ ಸೆಂಡಿಗೆ ಉಪ್ಪಿನಕಾಯಿ ಎಲ್ಲ ಮಾರಾಟ ಮಾಡಿ ಬದುಕ್ತಾ ಇದ್ದೆ. ಒಳ್ಳೆ ಕೈ ಹಿಡಿಯಿತು. ಕಾಲಕ್ರಮೇಣ ಪೇಟೆಯಲ್ಲಿ ನನ್ನ ಹಾಗೆ ಮಾಡಿಕೊಡುವವರ ಸಂಖ್ಯೆ ಹೆಚ್ಚಾಯಿತು. ನಂಗೆ ವ್ಯಾಪಾರ ಡಲ್ ಆಯಿತು. ಕಡೆಗೆ ನಾನು ಆ ಕೆಲಸ ಬಿಟ್ಟೆ. ಇಲ್ಲಿಯೇ ಪೇಟೆಯಲ್ಲಿ ಎರಡು ಮೂರು ಮನೆಗಳಲ್ಲಿ ಅಡುಗೆ ಮಾಡಿ ಕೊಡುದು, ಸಂಜೆ ಊರಿನ ದೇವಸ್ಥಾನದಲ್ಲಿ ಹೂ ಕಟ್ಟಿಕೊಡುದು, ಬತ್ತಿ ರೆಡಿ ಮಾಡಿಕೊಡುದು ಎಲ್ಲ ಮಾಡ್ತಿದ್ದೆ. ಈ ದರಿದ್ರ ಕೊರೊನಾದ ಕಾಟದಿಂದ ಎಲ್ಲ ಸಾ ಕೈದಾಯ್ತು. ನಾನು ಅಡುಗೆಗೆ ಹೋಗ್ತಾ ಇದ್ದ ಮನೆಯವರೆಲ್ಲ ಅಜ್ಜ ಅಜ್ಜಿಯರಾಗಿದ್ರು. ಅವರು ನೀವು ಇನ್ನು ಬರೂದು ಬೇಡ. ನಮ್ಮ ಮಕ್ಕಳು ಹೇಳಿದ್ದಾರೆ, ಹೊರಗಿನವರನ್ನು ಮನೆಯ ಒಳಗೆ ಸೇರಿಸಬಾರದು ಅಂತ. ಹಾಗಾಗಿ ನೀವು ಬರೂದು ಬೇಡ ಅಂತ ರಾಗ ಎಳೆದರು. ಅವರದ್ದೂ ತಪ್ಪಲ್ಲ ಬಿಡು. ಸೀಕು ಯಾರಿಂದ ಹೇಗೆ ಹರಡ್ತದೆ ಅಂತ ಗೊತ್ತಾಗೂದಿಲ್ಲ ಅಲ್ವಾ? ಈಚೆ ದೇವಸ್ಥಾನ ಸಾ ಬಂದ್ ಆಯ್ತು. ಅಲ್ಲಿಂದ ಬರುವ ನಾಕು ಪಾವಾಣೆ ಸಾ ನಿಂತಿತು. ಕೈಯಲ್ಲಿ ದುಡ್ಡು ಇಲ್ಲದೆ ನಾನು ಒದ್ದಾಡ್ತಾ ಇರೂದು ಉಂಟಲ್ವಾ? ಅದು ಯಾವ ವೈರಿಗೂ ಬೇಡ’ ಅಂತ ಹೇಳಿ ಕಣ್ಣು ಒರೆಸಿಕೊಂಡಳು.

‘ನಿಮ್ಮ ಮಗಳು? ಅವಳು ಎಂತ ಓದಿದ್ದಾಳೆ? ಉದ್ಯೋಗ ಎಂತಾದ್ರೂ ಮಾಡಿ ಸಾಯ ಮಾಡ್ಲಿಲ್ವಾ?’

‘ಅಯ್ಯೋ ಅದು ಇನ್ನೊಂದು ಬೇಜಾರಿನ ಕತೆ. ನಂಗೆ ಹೆಚ್ಚು ಬರವು ಸರವು ಇಲ್ಲ. ಮಗಳನ್ನು ಇಲ್ಲಿಯೇ ಪೇಟೆಯ ಶಾಲೆಗೆ ಹಾಕಿದ್ದೆ. ಹೈಸ್ಕೂಲು ತಂಕ ಚೆಂದ ಓತ್ತಾ ಇದ್ದಳು. ನಾನು ಚೆಂದ ಓದಿ ಡಾಕಟರು ಆಗ್ತೇನೆ ಅಂತ ಹೇಳ್ತಾ ಇದ್ದಳು. ಅವಳೇ ಇಷ್ಟದಿಂದ ಅದೆಂಥದಾ ಸಾಯನ್ಸ್ ಅಂತೆ, ಅದನ್ನು ತೆಕ್ಕೊಂಡಿದ್ದಳು. ಆದ್ರೆ ಬರ್ತಾ ಬರ್ತಾ ಒಂದು ನಮೂನಿ ಮಂಕರ ಹಾಗೆ ಆದಳು. ಎಂತ